ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಫೆಕ್ಷನ್ ಆಗಿದ್ದರೆ ಸಂಖ್ಯಾಬಲ ಕಡಿಮೆಯಾಗಿ ಡಿರೆಕಗ್ನೈಸ್ ಆಗುತ್ತದೆ. ಬಹುಮತ ಯಾರಿಗೆ ಇದೆಯೋ ಅವರಿಗೆ ಕೊಡಬೇಕು.

7. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ಬಾಳಗಡಿಯಲ್ಲಿ ತೆರೆಯುವುದು.

† ಶ್ರೀ ಹೆಚ್. ಜಿ. ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಕೊಪ್ಪ ತಾಲ್ಲೂಕಿನಲ್ಲಿ ಕೊಪ್ಪ ಟೌನಿಂದ ಬಾಳಗಡಿಯು ಸುಮಾರು ೩ ಕಿ. ಮೀ. ದೂರದಲ್ಲಿರುತ್ತದೆ. ಇದು ಬಿಂತರವಳ್ಳಿ ಮಂಡಲ ಪಂಚಾಯಿತಿಗೆ ಸೇರಿದ್ದು ಇಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳೂ ಕೇಂದ್ರೀಕೃತವಾಗಿದ್ದು ಸರ್ಕಾರಕ್ಕೆ ಹಣ ಪಾವತಿ ಮಾಡಬೇಕಾದಲ್ಲಿ ಬಾಳಗಡಿಯ ಖಜಾನೆ ಇಲಾಖೆಯಿಂದ ಕೌಂಟರ್ ಸಹಿ ಮಾಡಿಸಿಕೊಂಡು ಹಣ ಕಟ್ಟಲು ಕೊಪ್ಪ ಟೌನ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಹೋಗಿ ಬರಲು ೧೦ ರೂ. ಆಟೋ ಚಾರ್ಜ್ ತೆರಬೇಕಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಬಾಳಗಡಿಯಲ್ಲಿರುವ ತಾಲ್ಲೂಕ್ ಆಫೀಸಿನಲ್ಲಿಯೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ತೆರೆಯಲು ಸರ್ಕಾರ ಏಕೆ ಶೀಘ್ರ ಕ್ರಮ ಕೈಗೊಳ್ಳಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ತಂದಾ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಂತ್ತೇನೆ.

8. ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಆರ್. ವೆಂಕಟರಾವಯ್ಯ,—ಮಾನ್ಯ ಅಧ್ಯಕ್ಷರೇ, ಕರ್ನಾಟಕಾದ್ಯಂತ ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರು ಮುಷ್ಕರ ಹೂಡಲು ನೋಟೀಸ್ ಕೊಟ್ಟಿದ್ದಾರೆ. ಎಲ್ಲಾ ಪಟ್ಟಣಗಳ ಕುಡಿಯುವ ನೀರು ಸರಬರಾಜು ನಿಲ್ಲುವ ತೊಂದರೆಯಿದೆ.

ಹೋದ ಸಲ ಮುಷ್ಕರ ಮಾಡಿದಾಗ ಮುಷ್ಕರದ ದಿನವನ್ನು ರಜಾ ಎಂದು ಘೋಷಿಸಿಲ್ಲ, ಬಡ್ತಿ ಕೊಟ್ಟಿಲ್ಲ, ಎಲ್ಲರನ್ನೂ ಖಾಯಂ ಮಾಡಿಲ್ಲ. ಸಾವಿರಾರು ಕಾರ್ಮಿಕರನ್ನು ದಿನಕೂಲಿ ಕಾರ್ಮಿಕರೆಂದೇ ತೀರ್ಮಾನಿಸಿ ವರ್ಕ್‌ಚಾರ್ಜ್ ಕೆಲಸಗಾರರೆಂದು ಆಜ್ಞೆ ಮಾಡಿಲ್ಲ. ೧-೧-೧೯೬೬ರಿಂದ ಅವರನ್ನು ಖಾಯಂ ಮಾಡಲು ಒಪ್ಪಿದ್ದರೂ ಖಾಯಂ ಮಾಡಿಲ್ಲ. ಸಮಾನ ಕೆಲಸಕ್ಕೆ ಸಮಾನವೇತನ ತತ್ವಕ್ಕೆ ಕೊಡಲೊಪ್ಪಿದ್ದರೂ, ಸರ್ವೋಚ್ಚ ನ್ಯಾಯಾಲಯ ತಾ : ೧೭-೧-೧೯೬೬ರ ಆರ್ಡರ್ ಅನುಸರಿಸಿ ಅವರಿಗೆ ನೀಡಬೇಕಾದ ಅನುಕೂಲ ಕೊಟ್ಟಿಲ್ಲ. ೩-೪-೧೯೬೬ರ ಆರ್ಡರನ್ನು ಜಾರಿಗೊಳಿಸಿಲ್ಲ. ಸರ್ಕಾರ ತನ್ನ ಮಾತಿನ ಪ್ರಕಾರ ಇದನ್ನು ನಡೆಸಿಕೊಟ್ಟು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಈ ಪ್ರಸ್ತಾವನೆಯನ್ನು ಸದನದ ಮುಂದೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಕೂಡಲೇ ನೆರವು ತೆಗೆದುಕೊಳ್ಳುವಂತೆ ಹೇಳುತ್ತೇನೆ.

9. ಬೆಂಗಳೂರಿನ ಎಪಿ ಎಂಸಿ ಮಾರುಕಟ್ಟೆಯಲ್ಲಿ ಹಣ್ಣು ವ್ಯಾಪಾರಸ್ಥರು ಹಾಗೂ ಕಮಿಷನ್ ಏಜೆಂಟರು ಮುಷ್ಕರದ ಬೆದರಿಕೆ ಹಾಕಿರುವುದು.

† ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ಎಪಿ ಎಂಸಿ ಮಾರುಕಟ್ಟೆ ಕಲಾಸಿಪಾಳ್ಯದಲ್ಲಿರುವ ಹಣ್ಣು ವ್ಯಾಪಾರ ಮಾಡುವವರೂ, ಕಮಿಷನ್ ಏಜೆಂಟರೂ ಒಂದಾಗಿ ಸೇರಿ ಮುಷ್ಕರ ಹೂಡುವ ಬೆದರಿಕೆ ಹಾಕಿದ್ದಾರೆ. ಹಣ್ಣು ಮತ್ತು ತರಕಾರಿ ಬೆಳೆಗಾರರಿಂದ ಕಮಿಷನನ್ನು ಪಡೆಯಕೂಡದೆಂದು ಆಜ್ಞೆ ಇದ್ದರೂ ಸಹ ಇದಕ್ಕೆ ವಿರೋಧವಾಗಿ ಈ ಕಮಿಷನ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಏಜೆಂಟರು ಬೆಳೆಗಾರರಿಂದ ಹಣ ವಸೂಲಿ ಮಾಡಲು ಯತ್ನಿಸುತ್ತಿದ್ದಾರೆ. ಇದನ್ನು ಪ್ರತಿಭಡಿಸಿದ್ದರಿಂದ, ಈಗ ಕಮಿಷನ್‌ನವರೂ ವ್ಯಾಪಾರಸ್ಥರೂ ಶಾಮೀಲಾಗಿ ಬೆಳೆಗಾರರ ವಿರುದ್ಧ ತಿರುಗಿಬಿದ್ದಿರುವಂತಿದೆ. ಇದು ನ್ಯಾಯ ಮತ್ತು ಕಾನೂನಿಗೆ ವಿರುದ್ಧವಾಗಿದೆ. ಈ ಮುಷ್ಕರ ನಡೆದಲ್ಲಿ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ತೊಂದರೆಯಾಗುವುದರಲ್ಲಿ ಸಂದೇಹವಿಲ್ಲ. ಇದರ ಬಗ್ಗೆ ಸಹಕಾರ ಮಂತ್ರಿಗಳು ನಿರ್ದಿಷ್ಟ ನಿರ್ಣಯ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ. ಜನರಿಗೆ ಆಗುವ ತೊಂದರೆ ತಪ್ಪಿಸಬೇಕಾಗಿದೆ. ಮಾನ್ಯ ಸಹಕಾರ ಸಚಿವರು ಉತ್ತರ ಹೇಳಬೇಕಾಗಿ ವಿನಂತಿ.

ಶ್ರೀ ಆರ್. ಎಲ್. ಜಾಲಪ್ಪ.—ಒಂದು ವರ್ಷದ ಹಿಂದೆ ರೈತರ ಹಿತರಕ್ಷಣೆ ಮಾಡಬೇಕೆಂದು ನಾನು ನಿಯಂತ್ರಿತ ಮಾರುಕಟ್ಟೆಗೆ ಒಂದು ಕಾನೂನು ತಿದ್ದುಪಡಿಯನ್ನು ಈ ಸದನದಲ್ಲಿ ತಂದಿದ್ದೆನು. ಅದನ್ನು ಎಲ್ಲರೂ ಕೂಡ ಅವಿರೋಧವಾಗಿ ಪಾಸುಮಾಡಿಕೊಟ್ಟಿದ್ದರು. ಅದರಲ್ಲಿ ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ರಾಜ್ಯದಲ್ಲಿ ಮೊದಲು ಮೊದಲು ಅಲ್ಪಸ್ವಲ್ಪ ಪ್ರತಿಭಟನೆ ಇದ್ದರೂ ಕೂಡ ಆ ಕಾನೂನಿಗೆ ಹೊಂದಿಕೊಂಡು ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ನಮ್ಮ ರೈತರ ದುರಾದೃಷ್ಟವೆಂದು ಕಾಣುತ್ತದೆ ಬೆಂಗಳೂರಿಗೆ ಏನು ತರಕಾರಿ, ಹಣ್ಣುಗಳು ಬರುತ್ತಿವೆ ಅವುಗಳಿಗೆ ವ್ಯವಸಾಯಗಾರರಿಂದ ಕಮಿಷನ್ ತೆಗೆದುಕೊಳ್ಳುತ್ತಾರೆ ಆದರೆ ರಸೀದಿಯನ್ನು ಕೊಡುತ್ತಿಲ್ಲ ಹಾಗೂ ಯಾರು ಖರೀದಿ ಮಾಡುತ್ತಿದ್ದಾರೆ ಅವರಿಂದಲೂ ಕೂಡ ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ. ಲೆಕ್ಕಗಳನ್ನು ನೋಡಿ ಎಂದು ನಾನು ಸೂಚನೆ ಕೊಟ್ಟಿದ್ದಕ್ಕೆ ಕಾರ್ಯದರ್ಶಿಗಳು ಲೆಕ್ಕವನ್ನು ಪರಿಶೀಲಿಸಲು ಬೆಳಿಗ್ಗೆ ೫–೩೦ಕ್ಕೆ ಹೋದರು ಆಗ ಅವರನ್ನು ಹೊಡೆದಿದ್ದಾರೆ. ಎರಡನೇ ಸಾರಿ ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಮುತ್ತಿಗೆ ಹಾಕಿ ಇನ್ನೇನು ಏಟುಗಳು ಬೀಳಬೇಕು ಆಗ ಪೋಲೀಸರು ಬಂದು ಬಚಾವ್ ಮಾಡಿಕಳಿಸಿದ್ದಾರೆ. ತರಕಾರಿ ಬೆಳೆಗಾರರ ಸಂಘ ಏನಿದೆ ಅದರ ಕಾರ್ಯದರ್ಶಿಗಳು ಮಾಲು ಬಂದಿದ್ದಕ್ಕೆ ಲೆಕ್ಕ ಇಡುವುದಿಲ್ಲ ಹಾಗೂ ಯಾರು ಪರ್ಚೇಸ್ ಮಾಡುತ್ತಾರೆ ಅವನಿಗೂ ಕೂಡ ರಸೀದಿ ಕೊಡುವುದಿಲ್ಲ. ಆದರ ಬಗ್ಗೆ ೪೮ ಗಂಟೆಯೊಳಗೆ ಸಮಜಾಯಿಷಿ ಕೊಡಬೇಕೆಂದು ನೋಟೀಸ್ ಕೊಟ್ಟರು. ಮಾಲೂರು ಮುನಿಸ್ವಾಮಪ್ಪ, ಎಂ. ರಾಮಕೃಷ್ಣ ಎಂಬುವರಿದ್ದಾರೆ ರಾಮಕೃಷ್ಣ ಎಂಬುವವರ ತರಕಾರಿ ಬೆಳೆಗಾರರ ಮಾರಾಟಗಾರರ ಸಂಘದ ಕಾರ್ಯದರ್ಶಿಗಳಾಗಿದ್ದಾರೆ. ಈ ಸಂಘದ ಕಾರ್ಯದರ್ಶಿಗಳು ಎ ಪಿ.ಎಂ.ಸಿ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದು ಸಿಕ್ಕಿದವರನ್ನು ಲೆಕ್ಕ ಕೇಳುವುದಕ್ಕಾಗುವುದಿಲ್ಲ. ಲೆಕ್ಕ ಕೇಳಬೇಕಾದರೆ ಅಸೋಷಿಯೇಷನ್ ಮೂಲಕವಾಗಿ ಕೇಳಬೇಕೆಂದು ಹೇಳಿದರು. ಅಸೋಷಿಯೇಷನ್‌ಗೆ ನಾವು ಲೈಸನ್ಸ್ ಕೊಟ್ಟಿಲ್ಲ. ಇಂಡಿವಿಜ್ಯುಯಲ್ ಆಗಿ ಲೈಸನ್ಸ್ ಕೊಟ್ಟಿದ್ದೇವೆ. ಅವರು ಲೆಕ್ಕ ಇಡಬೇಕಾಗಿತ್ತು ನಂತರ ಲೈಸನ್ಸ್ ಅನ್ನು ಏಳು ದಿವಸಗಳ ಕಾಲ ಅಮಾನತ್ತಿನಲ್ಲಿ ಇಟ್ಟರು. ಇನ್ನೊಂದು ಕೇಸ್‌ನಲ್ಲಿ ಫರೂಕ್ ಅಹಮದ್ ಎಂಬುವವರು ಲೈಸನ್ಸ್ ಇಲ್ಲದೆ ಕೆಲಸ ಮಾಡುತ್ತಿದ್ದು ಆ ಬಗ್ಗೆ ಕೋರ್ಟಿಗೆ ಹೋಗಿದ್ದಾಗ ಒಂದು ಸಾವಿರ ರೂಪಾಯಿ ಜುಲ್ಮಾನೆಯಾಯಿತು. ಈ ಎಲ್ಲಾ ಕಾರಣಗಳಿಂದ ಪ್ರತಿಭಟನೆಯನ್ನು ಪ್ರಾರಂಭ ಮಾಡಿದ್ದಾರೆ. ಸರ್ಕಾರದ ಪರವಾಗಿ ವ್ಯವಸಾಯ ಮಾರಾಟ ಸಮಿತಿ ಹಾಗೂ ನಮ್ಮ ತೋಟ ಬೆಳೆಗಾರರ ಮಾರಾಟ ಸಮಿತಿ, ಸಹಕಾರ ಇಲಾಖೆಯ ಕಾರ್ಯದರ್ಶಿಗಳು, ಪೋಲೀಸ್ ಇಲಾಖೆಯ ಕಮಿಷನರ್‌ರವರನ್ನು, ಗೃಹ ಕಾರ್ಯದರ್ಶಿಯವರನ್ನು ಕರೆಸಿ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಕೆಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಕಲಾಸಿಪಾಳ್ಯಂನಲ್ಲಿ ಗದ್ದಲ ಜಾಸ್ತಿ ಆಲ್ಲಿ ಸ್ಟೈಕ್ ಮಾಡಿದ್ದಾರೆ ಎಂದು ನನಗೆ ವರ್ತಮಾನ ಬಂದಿದೆ, ಬೇರೆ ಕಡೆಗಳಲ್ಲಿ ವ್ಯಾಪಾರ ನಡೆಯುತ್ತಿರುವುದೆಂದು ವರ್ತಮಾನ ಬಂದಿದೆ. ನಾಲ್ಕು ಮಾರುಕಟ್ಟೆಗಳನ್ನು ಮಾಡಿದ್ದೇವೆ ಆಲ್ ಇಂಡಿಯಾ ರೇಡಿಯೋ ಮೂಲಕ ಪತ್ರಿಕೆಯ ಮೂಲಕ ಪ್ರಚಾರ ಕೂಡ ಮಾಡಿದ್ದೇವೆ. ಲಾಲ್‌ಬಾಗ್‌ನಲ್ಲಿ ಹಣ್ಣು ಮಾರಾಟಗಾರರ ಸಂಸ್ಕರಣಾ ಸಂಸ್ಥೆ ಏನಿದೆ ಅಲ್ಲಿಗೆ ನೀವು ಬೆಳೆದಂತಹ ಮಾಲನ್ನು ತೆಗೆದುಕೊಂಡು ಬನ್ನಿ ಇಲ್ಲವೇ ನೃಪತುಂಗ ರೋಡಿನಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಇದೆ. ಬಿನ್ನಿ ಮಿಲ್‌ನಲ್ಲಿ ಎ ಪಿ.ಎಂ.ಸಿ. ಯ ನಾಲ್ಕು ಎಕರೆ ಇದೆ ಅಲ್ಲಿ ಶಾಮಿಯಾನ ಹಾಕಿಸಿದ್ದೇವೆ ಮತ್ತು ವರ್ತೂರು–ಬೆಂಗಳೂರು ರಸ್ತೆಯಲ್ಲಿ ಒಂದು ಗ್ರಾಮದಲ್ಲಿ ಮಾಡಿದ್ದೇವೆ. ನಿಮ್ಮ ಮಾಲನ್ನು ಅಲ್ಲಿಗೆ ತನ್ನಿ ಎಂದು ಹೇಳಿದ್ದೇವೆ. ನೇರವಾಗಿ ಕೊಂಡುಕೊಳ್ಳುವವರಿಗೆ ಯಾವುದೇ ವಿಧವಾದ ಕಮಿಷನ್ ಇಲ್ಲ ಹಾಗೂ ಮಾರುಕಟ್ಟೆ ಫೀಸ್ ಅನ್ನು ಬಿಡಿ ಎಂದು ಹಣ್ಣು ಮಾರಾಟ ಸಹಕಾರ ಸಂಘ ಏನಿದೆ ಅವರಿಗೆ ಹೇಳಿದ್ದೇವೆ ಮತ್ತು ೦–೨೦ ಲಕ್ಷ ರೂಪಾಯಿ ಲಾಸ್ ಆದರೂ ಚಿಂತೆಯಿಲ್ಲ ಎಷ್ಟು ಮಾಲು ಬಂದರೂ ಕೂಡ ಪರ್ಚೇಸ್ ಮಾಡಿ ಎಂದು ಹೇಳಿದ್ದೇನೆ. ಈ ಜಾಗಗಳ ಪೈಕಿ ಎಲ್ಲಿಯಾದರೂ ಕೊಂಡುಕೊಳ್ಳಿ ಎಂದು ಚಿಲ್ಲರೆ ವರ್ತಕರಿಗೆ

ಹೇಳಿದ್ದೇನೆ. ಯಾವುದೇ ವಿಧವಾದ ಕಮಿಷನ್ ಅನ್ನು ಹಾಕಿ ವುದಿಲ್ಲ. ಈ ದಳ್ಳಾಳಿಗಳ ದುರಾಡಳಿತ ವನ್ನು ಈ ಸದನ ಖಂಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕೆ ತಾವೆಲ್ಲರೂ ಸಹಕಾರ ವನ್ನು ಕೊಡಬೇಕು. ಈ ಬಗ್ಗೆ ಯಾವುದೇ ವಿಧವಾದ ಒತ್ತಡ ಬಂದರೂ ಕೂಡ ಮಣಿಯುವುದಿಲ್ಲ ವೆಂದು ಭರವಸೆ ಕೊಡುತ್ತೇನೆ. ಬೆಂಗಳೂರಿನ ಗ್ರಾಹಕರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿ ಯಿಂದ ೫೦ ಅಂಗಡಿಗಳನ್ನು ತೆರೆದಿದ್ದೇವೆ. ಆ ಅಂಗಡಿಗಳು ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೮ ಗಂಟೆಯವರೆಗೂ ವ್ಯಾಪಾರವನ್ನು ಮಾಡುವ ಹಾಗೆ ಇನ್ಸ್‌ಟ್ರಕ್ಷನ್‌ನ್ನು ಕೊಟ್ಟಿದ್ದೇನೆ. ಹಣ್ಣು ಮತ್ತು ತರಕಾರಿಗಳನ್ನು ವ್ಯಾನ್‌ಗಳಲ್ಲಿ ತೆಗೆದುಕೊಂಡು ಹೋಗಿ ಎಲ್ಲಾ ಬಡಾವಣೆಗಳಲ್ಲೂ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇನೆ. ಯಾವ ರೀತಿಯಲ್ಲಿ ಹಣ್ಣು ಮತ್ತು ತರಕಾರಿಯನ್ನು ಕೊಂಡುಕೊಳ್ಳಬೇಕು ಎಂಬುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಕೊಡುವಂತೆ ಆದೇಶ ನೀ